# 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು

**ಸತ್ರ ಮೊಕದ್ದಮೆ ನಂಃ 95/2024**

| | | |
|---|---|---|
| ಸಾಕ್ಷಿದಾರರ ಹೆಸರು | - ಪ್ರದೀಪ್ | ಪಿಡಬ್ಲೂ -12 |
| ತಂದೆಯ ಹೆಸರು | - ಸುರೇಶ | ಸಿಡಬ್ಲೂ -28 |
| ವಯಸ್ಸು | - 31 ವರ್ಷ | |
| ಉದ್ಯೋಗ | - ಪೇದೆ 44, ಚಿಕ್ಕಮಗಳೂರು ನಗರ ಪೊಲೀಸ್ ಠಾಣೆ | |
| ವಾಸ ಸ್ಥಳ | - ಚಿಕ್ಕಮಗಳೂರು | |

(ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)

ದಿನಾಂಕಃ 31-12-2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು ಈಗ್ಗೆ 3 ವರ್ಷಗಳಿಂದ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ ಕಾರ್ಯ

ನಿರ್ವಹಿಸುತ್ತಿದ್ದೇನೆ.

2. ನನಗೆ ಎಫ್.ಎಲ್.ಎಂ.ಎಸ್ ತಂತ್ರಾಂಶದ ಬಗ್ಗೆ ತರಬೇತಿಯಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 08-07-2024 ರಂದು ತನಿಖಾಧಿಕಾರಿಗಳಾದ ಚಾಸಾ.33 ರವರು ಎಫ್.ಎಲ್.ಎಂ.ಎಸ್ ತಂತ್ರಾಂಶದಲ್ಲಿ ಯುಸರ್ ಐಡಿ ಮತ್ತು ಪಾಸ್‌ವರ್ಡ್ ನ್ನು ಹಾಕಿ ಲಾಗಿನ್ ಆಗಿ ಈ ಪ್ರಕರಣಕ್ಕೆ ಸಂಬಂಧಿಸಿದ ಎಫ್.ಎಸ್.ಎಲ್ ವರದಿಯನ್ನು ಡೌನ್ ಲೋಡ್ ಮಾಡಿಕೊಡುವಂತೆ ಸೂಚಿಸಿರುತ್ತಾರೆ. ಅದರ ಮೇರೆಗೆ ನಾನು ಎಫ್.ಎಲ್.ಎಂ.ಎಸ್ ತಂತ್ರಾಂಶದಲ್ಲಿ ಯುಸರ್ ಐಡಿ ಮತ್ತು ಪಾಸ್‌ವರ್ಡ್ ನ್ನು ಹಾಕಿ ಲಾಗಿನ್ ಆಗಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರ್.ಎಫ್.ಎಸ್.ಎಲ್ ಮಂಗಳೂರಿನಿಂದ ಬಂದಿದ್ದ ವರದಿಯನ್ನು ವಿವ್ ಮಾಡಿ ಡೌನ್ ಲೋಡ್ ಮಾಡಿ, ಅದರಲ್ಲಿದ್ದ ಡಿಜಿಟಲ್ ಸಿಗ್ನೇಚರ್ ನ್ನು ವೇರಿಫೈ ಮಾಡಿ ಅದರ ಪ್ರಿಂಟ್ ತೆಗೆದು ತನಿಖಾಧಿಕಾರಿಗಳಿಗೆ ಕೊಟ್ಟೆನು.

3. ಆ ಬಗ್ಗೆ ಅದೇ ದಿನ ಚಾಸಾ.33 ರವರಿಗೆ ಭಾರತೀಯ ಸಾಕ್ಷ್ಯ ಅಧಿನಿಯಮ ರಡಿಯಲ್ಲಿ ದೃಢೀಕರಣ ಪತ್ರವನ್ನು ತಯಾರಿಸಿ ನೀಡಿದ್ದೆನು. ಸದರಿ ದೃಢೀಕರಣ ಪತ್ರ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.25 ಎಂದು ಸಾಕ್ಷಿಯ ಸಹಿಯನ್ನು ನಿಪಿ.25(ಎ) ಎಂದು ಗುರುತಿಸಲಾಯಿತು. ಎಫ್.ಎಲ್.ಎಂ.ಎಸ್ ತಂತ್ರಾಂಶದಲ್ಲಿ ಡೌನ್ ಲೋಡ್ ಮಾಡಿ ಪ್ರಿಂಟ್ ಹಾಕಿ ನೀಡಿದ ಆರ್.ಎಫ್.ಎಸ್.ಎಲ್ ಮಂಗಳೂರುರವರ ವರದಿ ಮತ್ತು

ಪತ್ರವನ್ನು ನೋಡಿ ಗುರುತಿಸಿರುತ್ತಾರೆ. ಸದರಿ ವರದಿಯನ್ನು ಈಗಾಗಲೇ ನಿಪಿ.22 ಎಂದು ಗುರುತಿಸಲಾಗಿರುತ್ತದೆ. ಸದರಿ ಪತ್ರವನ್ನು ಈಗ ನಿಪಿ.26 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿಃ **LADCS** ನ **Deputy Chief Defense counsel** ಆದ ಶ್ರೀ ಎನ್.ಡಿ ವಕೀಲರಿಂದಃ</u>

4. ಎಫ್.ಎಲ್.ಎಂ.ಎಸ್ ತಂತ್ರಾಂಶದ ಯುಸರ್ ಐಡಿ ಮತ್ತು ಪಾಸ್‌ವರ್ಡ್ ತನಿಖಾಧಿಕಾರಿಗಳ ಬಳಿ ಇರುತ್ತದೆ. ನೀವು ವರದಿಯನ್ನು ಡೌನ್ ಲೋಡ್ ಮಾಡಿದ್ದೀರಿ ಎಂದು ಹೇಳಲಾದ ಕಂಪ್ಯೂಟರ್ ನ ಐ.ಪಿ. ಅಡ್ರೇಸ್‌ನ್ನು ನಿಪಿ.25 ರಲ್ಲಿ ನಮೂದು ಮಾಡಿಲ್ಲ ಎಂದರೆ ಸಾಕ್ಷಿ ಅದರ ಸಂಖ್ಯೆಯನ್ನು ನಮೂದು ಮಾಡಿದ್ದೇನೆ ಎನ್ನುತ್ತಾರೆ. ವರದಿಯ ಸಾಫ್ಟ್‌ಕಾಪಿಯನ್ನು ನಾನು ತನಿಖಾಧಿಕಾರಿಗಳಿಗೆ ಕೊಟ್ಟಿಲ್ಲ.

5. ಎಫ್.ಎಲ್.ಎಂ.ಎಸ್ ತಂತ್ರಾಂಶದ ಬಗ್ಗೆ ತರಬೇತಿ ಪಡೆದುಕೊಂಡಿದ್ದಾಗಿ ಹೇಳಿದ್ದೀರಿ ಆ ಬಗ್ಗೆ ದಾಖಲೆಯನ್ನು ತನಿಖಾಧಿಕಾರಿಗಳಿಗೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಮಗೆ ಕಂಪ್ಯೂಟರ್ ಬಗ್ಗೆ ತರಬೇತಿ ಇರುವ ಬಗ್ಗೆ ದಾಖಲೆಯನ್ನು ತನಿಖಾಧಿಕಾರಿಗಳಿಗೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಹೇಳಿದಂತೆ ಯಾವುದೇ ತರಬೇತಿ ಮತ್ತು ಅನುಭವ ಇಲ್ಲದಿದ್ದರೂ ಸಹ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ದಾಖಲೆಗಳನ್ನು ನೀಡಿ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಾನು ಎಂದಿಗೂ ಸಹ ಆರೋಪಿಯನ್ನು ಬೆಂಗಳೂರಿನ ಯಾವುದೇ ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ. ಚಿಕ್ಕಮಗಳೂರಿನ ಹಿರಿಯ ಸಿವಿಲ್ ಜಡ್ಜ ಮತ್ತು ಸಿಜೆಎಂ ನ್ಯಾಯಾಧೀಶರವರು ಕ್ರಿಮಿನಲ್ ಮಿಸ್ 307/2023 ರಲ್ಲಿ ಮಾಡಿದ್ದ ಆದೇಶದ ಮೇರೆಗೆ ಆರೋಪಿಯನ್ನು ನಿಮಾನ್ಸ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸುವಂತೆ ನಿಮ್ಮ ಠಾಣೆಗೆ ಸೂಚಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ